# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **2233**

ಸದಸ್ಯರ ಹೆಸರು : ಶ್ರೀ ಗೋವಿಂದರಾಜು
(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 26-03-2021

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕೋವಿಡ್-19ರ ಹಿಂದಿನಿಂದಲೂ ಕೆ.ಎಸ್.ಆರ್.ಟಿ.ಸಿ ಸಂಸ್ಥೆಯು ನಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದಲ್ಲಿ ಇದಕ್ಕೆ ಕಾರಣಗಳೇನು; | ಹೌದು.<br>ಕ.ರಾ.ರ.ಸಾ. ನಿಗಮವು ನಷ್ಟವನ್ನು ಅನುಭವಿಸಲು ಕಾರಣವಾದ ಅಂಶಗಳ ವಿವರಗಳನ್ನು **"ಅನುಬಂಧ-ಅ"** ರಲ್ಲಿ ಒದಗಿಸಲಾಗಿದೆ. |
| (ಆ) | ಸದರಿ ಸಂಸ್ಥೆಯು ನಷ್ಟ ಹೊಂದಲು ಖಾಸಗಿ ವಾಹನಗಳ ಅನಧಿಕೃತ ಓಡಾಟವೆ ಕಾರಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸಂಸ್ಥೆಗಳು ನಷ್ಟ ಹೊಂದಲು ಖಾಸಗಿ ವಾಹನಗಳ ಅನಧಿಕೃತ ಓಡಾಟವು ಒಂದು ಕಾರಣವಾಗಿರುತ್ತದೆ. |
| (ಇ) | ಹಾಗಿದ್ದಲ್ಲಿ ಅನಧಿಕೃತವಾಗಿ ಓಡಾಡುವ ಖಾಸಗಿ ವಾಹನಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಹಾಗೂ ಅವರುಗಳಿಂದ ವಸೂಲಾದ ದಂಡದ ಮೊತ್ತವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಅನಧಿಕೃವಾಗಿ ಖಾಸಗಿ ವಾಹನಗಳು ಸಂಚರಿಸುತ್ತಿರುವ ವಿರುದ್ಧ ಸಾರಿಗೆ ಇಲಾಖೆಯ ವತಿಯಿಂದ ನಿರಂತರ ಪ್ರವರ್ತನ ಕಾರ್ಯ ಹಮ್ಮಿಕೊಂಡು ಅವುಗಳ ವಿರುದ್ಧ ಕ್ರಮ ಜರುಗಿಸಲಾಗುತ್ತಿದೆ. ದಿನಾಂಕ:01-04-2020 ರಿಂದ 28-02-2021 ರ ಅವಧಿಯಲ್ಲಿ 9577 ಪ್ರಕರಣಗಳನ್ನು ದಾಖಲಿಸಿ, 223 ವಾಹನಗಳನ್ನು ವಶಪಡಿಸಿಕೊಂಡು, ದಂಡ ರೂ.3,95,22,193/-ಗಳನ್ನು ವಸೂಲಿ ಮಾಡಲಾಗಿರುತ್ತದೆ. ಜಿಲ್ಲಾವಾರು ವಿವರಗಳನ್ನು **"ಅನುಬಂಧ-ಆ"** ರಲ್ಲಿ ಒದಗಿಸಲಾಗಿದೆ. |
| (ಉ) | ಜಿಲ್ಲಾಮಟ್ಟದಲ್ಲಿ ಖಾಸಗಿ ವಾಹನಗಳಿಗೆ ಪರವಾನಿಗೆ ನೀಡುವಾಗ ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು; | ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳನ್ನು ರಚಿಸ ಲಾಗಿದ್ದು, ಅವುಗಳ ಆಯಾ ಜಿಲ್ಲೆಯಲ್ಲಿ ಅವಶ್ಯಕತೆಗೆ ಅನುಸಾರವಾಗಿ ಪ್ರಯಾಣಿಕ ವಾಹನಗಳಿಗೆ ರಹದಾರಿಗಳನ್ನು ನೀಡುವ ಪ್ರಾಧಿಕಾರಗಳಾಗಿರುತ್ತವೆ. ದಿನಾಂಕ:07-03-2019 ರಿಂದ ರಾಜ್ಯದಲ್ಲಿ "ಏರಿಯ ಸ್ಕೀಮ್" ಜಾರಿಗೊಳಿಸಲಾಗಿದ್ದು, ರಾಜ್ಯಾದ್ಯಂತ ಹೊಸದಾಗಿ ಯಾವುದೇ ಖಾಸಗಿ ಬಸ್ಸುಗಳಿಗೆ ರಹದಾರಿ ನೀಡುವುದನ್ನು ನಿರ್ಬಂಧಿಸಲಾಗಿದೆ. |
| (ಊ) | ಈ ಖಾಸಗಿ ವಾಹನಗಳು ಒಳ ರಸ್ತೆಗಳಲ್ಲಿ ಸಂಚರಿಸಲು ಪರವಾನಗಿ ಪಡೆದು ಮುಖ್ಯ ರಸ್ತೆಗಳಲ್ಲಿ ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು,<br>ಸರ್ಕಾರದ ಗಮನಕ್ಕೆ ಬಂದಿರುತ್ತದೆ. |

| | | |
|---|---|---|
| (ಋ) | ಹಾಗಿದ್ದಲ್ಲಿ, ಇಂತಹ ಎಷ್ಟು ಖಾಸಗಿ ವಾಹನಗಳ ಮೇಲೆ ಕ್ರಮಕೈಗೊಳ್ಳಲಾಗಿದೆ; (ಜಿಲ್ಲಾವಾರು ವಿವರಗಳನ್ನು ನೀಡುವುದು) | ಪರವಾನಿಗೆ ಪಡೆದು ಒಳ ರಸ್ತೆಗಳಲ್ಲಿ ಸಂಚರಿಸದೆ ಮುಖ್ಯ ರಸ್ತೆಗಳಲ್ಲಿ ಸಂಚರಿಸುತ್ತಿರುವ ಖಾಸಗಿ ಬಸ್‌ಗಳ ವಿರುದ್ಧ ಕ್ರಮಕೈಗೊಳ್ಳಲು ಸಾರಿಗೆ ಇಲಾಖೆಯಿಂದ ನಿರಂತರವಾಗಿ ಪ್ರವರ್ತನ ಕಾರ್ಯ ಕೈಗೊಳ್ಳುತ್ತಿದ್ದು, ರಹದಾರಿ ಷರತ್ತು ಉಲ್ಲಂಘನೆ ಮಾಡಿ ಸಂಚರಿಸುತ್ತಿರುವ ವಾಹನಗಳ ರಹದಾರಿಗಳನ್ನು ಅಮಾನತ್ತು ಮಾಡುವ ಕಾರ್ಯ ಹಾಗೂ ದಂಡ ವಿಧಿಸುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. ಇದರ ಜಿಲ್ಲಾವಾರು ವಿವರಗಳನ್ನು **"ಅನುಬಂಧ – ಆ"** ರಲ್ಲಿ ಒದಗಿಸಲಾಗಿದೆ. |
| (ೠ) | ಕೆ.ಎಸ್.ಆರ್.ಟಿ.ಸಿ. ಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ನೌಕರರ ಸಂಖ್ಯೆ ಎಷ್ಟು; ಹಾಗೂ ಅಧಿಕಾರಿಗಳ ಸಂಖ್ಯೆ ಎಷ್ಟು; (ವೃಂದಗಳವಾರು ವಿವರ ನೀಡುವುದು) | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಜನವರಿ–2021 ರ ಮಾಹೆಯಲ್ಲಿದ್ದಂತೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ 37001 ಹಾಗೂ ಅಧಿಕಾರಿಗಳು ಸಂಖ್ಯೆ 348 ಒಟ್ಟು ಸೇರಿ 37349 ಅಧಿಕಾರಿ/ನೌಕರರು ಕಾರ್ಯ ನಿರ್ವಹಿಸುತ್ತಿರುತ್ತಾರೆ. ವೃಂದವಾರು ಮಾಹಿತಿಯನ್ನು **"ಅನುಬಂಧ–ಇ"** ರಲ್ಲಿ ಒದಗಿಸಲಾಗಿದೆ. |
| (ಎ) | ಕೋವಿಡ್–19ರ ನಂತರ ಇದುವರೆವಿಗೂ ಸಾರಿಗೆ ಸಂಸ್ಥೆಗಳ ಸಂಬಳ ಹಾಗೂ ಇತರೆ ವೆಚ್ಚಗಳಿಗೆ ಸರ್ಕಾರ ನೀಡಿರುವ ಮೊತ್ತವೆಷ್ಟು; | ಕೋವಿಡ್–19ರ ನಂತರ ಇದುವರೆವಿಗೂ ಸಾರಿಗೆ ಸಂಸ್ಥೆಗಳ ಸಂಬಳ ಹಾಗೂ ಇತರೆ ವೆಚ್ಚಗಳಿಗೆ ಸರ್ಕಾರ ನೀಡಿರುವ ಮೊತ್ತದ ಕುರಿತು ನಿಗಮವಾರು ಮಾಹಿತಿ ಈ ಕೆಳಕಂಡಂತಿದೆ:<br><br>**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:**<br>ಕೋವಿಡ್–19ರ ನಂತರ ಇದುವರೆವಿಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಸಿಬ್ಬಂದಿಗಳಿಗೆ ಏಪ್ರಿಲ್–2020 ರಿಂದ ನವೆಂಬರ್–2020 ರವರೆಗಿನ ಮಾಹೆಯಾನ ವೇತನ ಪಾವತಿ ಮಾಡಲು ರೂ.563.55 ಕೋಟಿಗಳನ್ನು ವಿಶೇಷ ಅನುದಾನ ಬಿಡುಗಡೆ ಮಾಡಿರುತ್ತಾರೆ. ಹಾಗೂ ಲಾಕ್‌ಡೌನ್‌ನಿಂದಾಗಿ ರಾಜ್ಯಗಳಲ್ಲಿ ಸಿಲುಕಿಗೊಂಡಿದ್ದ ವಲಸೆ ಕಾರ್ಮಿಕರ ಸ್ಥಳಾಂತರಕ್ಕೆ ಸಾರಿಗೆ ವ್ಯವಸ್ಥೆ ಕಲ್ಪಿಸಿದ್ದು ಉಂಟಾದ ವೆಚ್ಚ ರೂ.7.84 ಕೋಟಿಗಳನ್ನು ರಾಜ್ಯ ಸರ್ಕಾರದ ವಿಪತ್ತು ನಿರ್ವಹಣಾ ಪ್ರಾಧಿಕಾರದ ವತಿಯಿಂದ ನಿಗಮಕ್ಕೆ ಬಿಡುಗಡೆಗೊಳಿಸಲಾಗಿರುತ್ತದೆ.<br><br>**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ :**<br>ಸರ್ಕಾರವು ಸಂಸ್ಥೆಯ ಅಧಿಕಾರಿ/ಸಿಬ್ಬಂದಿಗಳ ವೇತನ ಪಾವತಿಗೆ ಏಪ್ರಿಲ್–20 ರಿಂದ ಮಾರ್ಚ್–2021 ರವರೆಗೆ ರೂ.690.55 ಕೋಟಿಗಳನ್ನು ಹಾಗೂ ಕೋವಿಡ್–19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ಸುರಕ್ಷತಾ ಸಾಮಾಗ್ರಿಗಳ (ಮಾಸ್ಕ್, ಫೇಸ್ ಶೀಲ್ಡ್, ಸ್ಯಾನಿಟೈಸರ್ ಇತ್ಯಾದಿ) ಖರೀದಿಗೆ ರೂ.122.85 ಲಕ್ಷಗಳನ್ನು ಹಾಗೂ ಪಿ.ಎಂ ಕೇರ್ ನಿಧಿಯಡಿಯಲ್ಲಿ ಹೊರ ರಾಜ್ಯದ ಕಾರ್ಮಿಕರಿಗೆ ಒದಗಿಸಿರುವ ಶುಲ್ಕರಹಿತ ವಿಶೇಷ ಸಾರಿಗೆ ಸೇವೆಗಳ ವೆಚ್ಚದಡಿಯಲ್ಲಿ ರೂ.338.34 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ. |

| | | |
|---|---|---|
| | | **ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:**<br><br>ಈ.ಕ.ರ.ಸಾ.ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ವೇತನ ಪಾವತಿಗಾಗಿ ಏಪ್ರಿಲ್–2020ರಿಂದ ನವೆಂಬರ್–2020 ಮಾಹೆಯವರೆಗೆ ರಾಜ್ಯ ಸರ್ಕಾರದಿಂದ ರೂ.329.89 ಕೋಟಿಗಳ ಅನುದಾನ/ಸಹಾಯಧನವನ್ನು ಬಿಡುಗಡೆ ಮಾಡಿರುತ್ತದೆ. ಅದರನ್ವಯ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಮತ್ತು ಸಂಸ್ಥೆಯ ಆಂತರಿಕ ಸಂಪನ್ಮೂಲದಿಂದ ಏಪ್ರಿಲ್–2020 ಮಾಹೆಯಿಂದ ನವೆಂಬರ್–2020 ಮಾಹೆಯವರೆಗೆ ನೌಕರರಿಗೆ ವೇತನವನ್ನು ಪಾವತಿ ಮಾಡಲಾಗಿರುತ್ತದೆ.<br><br>ಮುಂದುವರೆದು ಕೋವಿಡ್–19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ಪ್ರಸ್ತುತ ವರ್ಷದಲ್ಲಿ ಕೇಂದ್ರ ಸರ್ಕಾರದಿಂದ ಸಂಸ್ಥೆಗೆ ರೂ.1.02 (ಒಂದು ಕೋಟಿ ಎರಡು ಲಕ್ಷ ರೂಪಾಯಿಗಳು) ಕೋಟಿಗಳನ್ನು ಮಂಜೂರು ಮಾಡಿದ್ದು, ಈ ಪೈಕಿ ರೂ.0.92 (ತೊಂಬತ್ತೆರಡು ಲಕ್ಷ ರೂಪಾಯಿಗಳು) ಕೋಟಿಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.<br><br>**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:**<br>ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ವೇತನ ಪಾವತಿಗಾಗಿ ಏಪ್ರಿಲ್–2020 ರಿಂದ ನವೆಂಬರ್–2020 ರ ಮಾಹೆಯವರೆಗೆ ರೂ.369.42 ಕೋಟಿಗಳ ಅನುದಾನ / ಸಹಾಯಧನವನ್ನು ಸರ್ಕಾರ ಬಿಡುಗಡೆ ಮಾಡಿರುತ್ತದೆ ಹಾಗೂ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಸರ್ಕಾರವು ಕೋವಿಡ್–19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ರೂ.91.80 ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ. |
| (ಏ) | ಸಾರಿಗೆ ಸಂಸ್ಥೆ ಮತ್ತು ವಾಹನಗಳ ಪುನಃಶ್ಚೇತನಕ್ಕೆ ಸರ್ಕಾರ ಯಾವುದಾದರು ಕಾರ್ಯಕ್ರಮಗಳನ್ನು ರೂಪಿಸಿದೆಯೇ; ಹಾಗಿದಲ್ಲಿ, ಕಾರ್ಯಕ್ರಮಗಳ ರೂಪುರೇಷೆಗಳೇನು? (ಪ್ರತಿಯನ್ನು ಒದಗಿಸುವುದು) | ನಿಗಮವನ್ನು ಲಾಭದಾಯಕವಾಗಿ ಪರಿವರ್ತಿಸಲು ಕೈಗೊಂಡ ಕ್ರಮಗಳನ್ನು **ಅನುಬಂಧ–ಈ** ರಲ್ಲಿ ನೀಡಲಾಗಿದೆ. |

ಟಿಡಿ 75 ಟಿಡಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು.

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2233 ಕ್ಕೆ ಅನುಬಂಧ–ಅ**

**ಕ.ರಾ.ರ.ಸಾ ನಿಗಮವು ನಷ್ಟದಲ್ಲಿರಲು ಪ್ರಮುಖ ಕಾರಣಗಳು.**

1. ಪ್ರಮುಖವಾಗಿ ದಿನೇ ದಿನೇ ಹೆಚ್ಚುತ್ತಿರುವ ಇಂಧನ ದರ, ಕಾಲಿಕವಾಗಿ ತುಟ್ಟಿ ಭತ್ಯೆ ಹಾಗೂ ವೇತನ ಬಡ್ತಿಯಿಂದಾಗಿ ಉಂಟಾಗುತ್ತಿರುವ ಸಿಬ್ಬಂದಿಗಳ ವೆಚ್ಚದಲ್ಲಿ ಹೆಚ್ಚಳ ಹಾಗೂ ಬಿಡಿ ಭಾಗಗಳ ದರದಲ್ಲಿ ಏರಿಕೆಯಿಂದಾಗಿ ನಿಗಮವು ನಷ್ಟ ಅನುಭವಿಸಲು ಮುಖ್ಯ ಕಾರಣವಾಗಿರುತ್ತದೆ.

2. ನಗರದ ಸಾರ್ವಜನಿಕ ಪ್ರಯಾಣಿಕರಿಗೆ ಹೆಚ್ಚಿನ ಸಾರಿಗೆ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ನಿಗಮವು 16 ನಗರಗಳಲ್ಲಿ 616 ನಗರ ಸಾರಿಗೆ ವಾಹನಗಳನ್ನು ಕಾರ್ಯಾಚರಣೆ ಮಾಡಿದ್ದು, ಈ ಪೈಕಿ ಹೆಚ್ಚಿನ ಸಾರಿಗೆಗಳು ನಷ್ಟದಲ್ಲಿ ಕಾರ್ಯಾಚರಣೆಯಾಗುತ್ತಿರುತ್ತವೆ.

3. ಕ.ರಾ.ರ.ಸಾ.ನಿಗಮದಲ್ಲಿ ಶೇ.36.79 ರಷ್ಟು ಸಾರಿಗೆಗಳನ್ನು ಗ್ರಾಮೀಣ ಭಾಗಗಳಿಗೆ ವಿದ್ಯಾರ್ಥಿಗಳ ಅನುಕೂಲಕ್ಕಾಗಿ, ಜನಪ್ರತಿನಿಧಿಗಳ ಬೇಡಿಕೆಗನುಗುಣವಾಗಿ ಕಾರ್ಯಾಚರಿಸಲಾಗುತ್ತಿದೆ. ನಿಗಮದ ವ್ಯಾಪ್ತಿಯ ಮಾರ್ಗಗಳಲ್ಲಿ ಒಟ್ಟು 44302 ಸಿಂಗಲ್ ಟ್ರಿಪ್‌ಗಳನ್ನು ಪ್ರತಿ ದಿನ ಕಾರ್ಯಾಚರಣೆ ಮಾಡುತ್ತಿದ್ದು, ಅದರಲ್ಲಿ 24777 ಸಾಮಾನ್ಯ ಸುತ್ತುವಳಿಗಳನ್ನು ಅಂದರೆ ಶೇ.55.93 ರಷ್ಟು ಸ್ಥಳೀಯ ಗ್ರಾಮಾಂತರ ಪ್ರದೇಶಗಳಿಗೆ ಕಾರ್ಯಾಚರಣೆ ಮಾಡಲಾಗುತ್ತಿದೆ. ಈ ಸುತ್ತುವಳಿಗಳಲ್ಲಿ ನಿರೀಕ್ಷಿತ ಸಾರಿಗೆ ಆದಾಯ ಬರದೆ ನಷ್ಟ ಉಂಟಾಗುತ್ತಿರುತ್ತದೆ. ಸದರಿ ಟ್ರಿಪ್‌ಗಳ ಕಾರ್ಯಾಚರಣೆಯಿಂದ ನಷ್ಟ ಉಂಟಾಗುತ್ತಿದ್ದರೂ ಸಾರ್ವಜನಿಕ ಪ್ರಯಾಣಿಕರ ಮತ್ತು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಅನಿವಾರ್ಯವಾಗಿ ಸಾರಿಗೆಗಳನ್ನು (Obligatory service) ಕಾರ್ಯಾಚರಣೆ ಮಾಡಬೇಕಾಗಿರುವ ಪರಿಸ್ಥಿತಿ ಇರುತ್ತದೆ.

4. ಭಾರತ್ ಬಂದ್, ಕರ್ನಾಟಕ ಬಂದ್, ಇತ್ಯಾದಿ ಕಾರಣಗಳಿಂದಾಗಿ ಸಾರಿಗೆಗಳ ಕಾರ್ಯಾಚರಣೆಗೆ ತೊಡಕಾಗಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡದಿರುವುದರಿಂದ ಸಾರಿಗೆ ಆದಾಯ ನಷ್ಟ ಉಂಟಾಗಲು ಕಾರಣವಾಗಿರುತ್ತದೆ.

5. ಕ.ರಾ.ರ.ಸಾ.ನಿಗಮದ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು ಗ್ರಾಮಾಂತರ, ತುಮಕೂರು, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಮೈಸೂರು, ಚಾಮರಾಜನಗರ. ಮಂಡ್ಯ, ಹಾಸನ, ಚಿಕ್ಕಮಗಳೂರು, ಮಂಗಳೂರು, ಉಡುಪಿ, ಪುತ್ತೂರು, ಕೊಡಗು, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯ ರಾಷ್ಟ್ರೀಕೃತ ಮಾರ್ಗಗಳಲ್ಲಿ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಕರಾರಸಾ ನಿಗಮದ ವತಿಯಿಂದ ಸಾಕಷ್ಟು ಸಂಖ್ಯೆಯಲ್ಲಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಆದಾಗ್ಯೂ, ಮೇಲ್ಕಂಡ ಜಿಲ್ಲೆಗಳ ವ್ಯಾಪ್ತಿಯ ರಾಷ್ಟ್ರೀಕೃತ ಮಾರ್ಗಗಳಲ್ಲಿ ಖಾಸಗಿ ಪ್ರವರ್ತಕರ ಖಾಸಗಿ ಬಸ್, ಮ್ಯಾಕ್ಸಿಕ್ಯಾಬ್, ಜೀಪ್, ಅಪೆ ಆಟೋ, ಮಿನಿ ಬಸ್, ಇತ್ಯಾದಿ, ಪ್ರಯಾಣಿಕರ ವಾಹನಗಳು ಅನಧಿಕೃತವಾಗಿ ಕಾರ್ಯಾಚರಣೆ ಮಾಡಿ ನಿಗಮದ ಸಾರಿಗೆಗಳೊಂದಿಗೆ ಅನಾರೋಗ್ಯಕರ ಪೈಪೋಟಿ ನಡೆಸಿ ನಿಗಮದ ಸಾರಿಗೆಗಳ ಆದಾಯಕ್ಕೆ ಧಕ್ಕೆ ಉಂಟು ಮಾಡುತ್ತಿರುತ್ತಾರೆ.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2233 ಕ್ಕೆ ಅನುಬಂಧ – ಆ

| ಕ್ರ.ಸಂ. | ಜಿಲ್ಲೆಯ ಹೆಸರು | ದಾಖಲಿಸಿದ ಪ್ರಕರಣಗಳು | ವಶಪಡಿಸಿಕೊಂಡ ವಾಹನಗಳು | ವಸೂಲಿಸಿದ ದಂಡ (ರೂ.) |
|---|---|---|---|---|
| 1 | ಬೆಂಗಳೂರು ನಗರ | 2247 | 218 | 10132955 |
| 2 | ಬೆಂಗಳೂರು ಗ್ರಾಮಾಂತರ | 195 | 0 | 416600 |
| 3 | ರಾಮನಗರ | 3 | 0 | 31800 |
| 4 | ತುಮಕೂರು | 277 | 5 | 657640 |
| 5 | ಚಿಕ್ಕಬಳ್ಳಾಪುರ | 320 | 0 | 1134160 |
| 6 | ಕೋಲಾರ | 2483 | 0 | 8027995 |
| 7 | ಮೈಸೂರು | 04 | 0 | 45400 |
| 8 | ಮಂಡ್ಯ | 0 | 0 | 0 |
| 9 | ಮಡಿಕೇರಿ | 0 | 0 | 0 |
| 10 | ಹಾಸನ | 913 | 0 | 1669300 |
| 11 | ಚಾಮರಾಜನಗರ | 0 | 0 | 0 |
| 12 | ಶಿವಮೊಗ್ಗ | 0 | 0 | 0 |
| 13 | ದಾವಣಗೆರೆ | 81 | 0 | 405000 |
| 14 | ಚಿತ್ರದುರ್ಗ | 1659 | 0 | 11909631 |
| 15 | ಚಿಕ್ಕಮಗಳೂರು | 1140 | 0 | 1807811 |
| 16 | ಮಂಗಳೂರು | 49 | 0 | 182900 |
| 17 | ಉಡುಪಿ | 0 | 0 | 0 |
| 18 | ಬೆಳಗಾಂ | 0 | 0 | 0 |
| 19 | ಧಾರವಾಡ | 0 | 0 | 0 |
| 20 | ಗದಗ | 0 | 0 | 0 |
| 21 | ಬಿಜಾಪುರ | 0 | 0 | 0 |
| 22 | ಬಾಗಲಕೋಟೆ | 0 | 0 | 0 |
| 23 | ಉತ್ತರ ಕನ್ನಡ | 0 | 0 | 0 |
| 24 | ಹಾವೇರಿ | 0 | 0 | 0 |
| 25 | ಗುಲ್ಬರ್ಗಾ | 33 | 0 | 1354596 |
| 26 | ಯಾದಗಿರ | 03 | 0 | 16500 |
| 27 | ಬಳ್ಳಾರಿ | 0 | 0 | 0 |
| 28 | ಹೊಸಪೇಟ | 43 | 0 | 215000 |
| 29 | ರಾಯಚೂರು | 24 | 0 | 852064 |
| 30 | ಕೊಪ್ಪಳ | 44 | 0 | 122475 |
| 31 | ಬೀದರ್ | 59 | 0 | 540366 |
| | ಒಟ್ಟು | **9577** | **223** | **39522193** |

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2233 ಕ್ಕೆ "ಅನುಬಂಧ-ಇ"

ಅಧಿಕಾರಿ/ಸಿಬ್ಬಂದಿಗಳ ದರ್ಜೆವಾರು ಮಾಹಿತಿ ವಿವರ: ಜನವರಿ-2021

| ಕ್ರ.ಸಂ | ದರ್ಜೆವಾರು | ಕಾರ್ಯನಿರ್ವಹಣೆ |
|---|---|---|
| ಅಧಿಕಾರಿಗಳು | | |
| 1 | ದರ್ಜೆ-1 ಆಯ್ಕೆ ಶ್ರೇಣಿ ಸೂಪರ್‌ಟೈಮ್/ ದರ್ಜೆ-1 ಆಯ್ಕೆ ಶ್ರೇಣಿ | 4 |
| 2 | ದರ್ಜೆ-1 ಆಯ್ಕೆ ಶ್ರೇಣಿ | 5 |
| 3 | ದರ್ಜೆ-1 ಆಯ್ಕೆ ಶ್ರೇಣಿ/ ದರ್ಜೆ-1 ಹಿರಿಯ | 4 |
| 4 | ದರ್ಜೆ-1 ಹಿರಿಯ | 41 |
| 5 | ದರ್ಜೆ-1 ಕಿರಿಯ | 95 |
| 6 | ದರ್ಜೆ-2 | 199 |
| | ಒಟ್ಟು | **348** |
| ನೌಕರರು | | |
| 1 | ದರ್ಜೆ-3 (ಮೇಲ್ವಿಚಾರಕ) | 671 |
| 2 | ದರ್ಜೆ-3 (ಮೇಲ್ವಿಚಾರಕೇತರ) | 35787 |
| 3 | ದರ್ಜೆ-4 | 543 |
| ಒಟ್ಟು | | **37001** |
| ಒಟ್ಟು ಸಂಖ್ಯೆ | | **37349** |

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2233 ಕ್ಕೆ "ಅನುಬಂಧ-ಈ"**

**ಕ.ರಾ.ರ.ಸಾ.ನಿಗಮವನ್ನು ಲಾಭದಾಯಕವಾಗಿ ಪರಿವರ್ತಿಸಲು ಕೈಗೊಂಡಿರುವ ಕ್ರಮಗಳ/ಯೋಜನೆಗಳ ವಿವರಗಳು.**

- ಕ.ರಾ.ರ.ಸಾ. ನಿಗಮದ ವತಿಯಿಂದ ಸಾಮಾನ್ಯ, ನಗರ ಮತ್ತು ವೇಗದೂತ ಸಾರಿಗೆಗಳಲ್ಲದೆ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಹೊಸ ತಾಂತ್ರಿಕತೆಯ ವಾಹನಗಳಾದ ರಾಜಹಂಸ, ಐರಾವತ, ಎ.ಸಿ ಸ್ಲೀಪರ್, ನಾನ್ ಎಸಿ ಸ್ಲೀಪರ್, ಐರಾವತ ಕ್ಲಬ್‌ಕ್ಲಾಸ್, ಫ್ಲೈ-ಬಸ್, ಅಂಬಾರಿ ಡ್ರೀಮ್‌ಕ್ಲಾಸ್ ಮುಂತಾದ ಪ್ರತಿಷ್ಠಿತ ಸಾರಿಗೆಗಳನ್ನು ಕಾರ್ಯಾಚರಿಸಿ ರಾಜ್ಯದ ಹಾಗೂ ನೆರೆ ರಾಜ್ಯದ ಪ್ರಮುಖ ಸ್ಥಳಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.
- ವಾಹನಗಳನ್ನು ಮಾರ್ಗ ಕಾರ್ಯಾಚರಣೆಗೆ ನಿಯೋಜಿಸುವ ಮುನ್ನ ವಾಹನಗಳ ತಾಂತ್ರಿಕ & ಶುಚಿತ್ವವನ್ನು ಪರಿಶೀಲಿಸಿ ಸುಸ್ಥಿತಿಯಲ್ಲಿರುವ ಬಗ್ಗೆ ಖಾತರಿಪಡಿಸಿಕೊಂಡ ನಂತರವೇ ಮಾರ್ಗ ಕಾರ್ಯಾಚರಣೆಗೆ ನಿಯೋಜಿಸುವುದರಿಂದ ಮಾರ್ಗ ಮಧ್ಯೆ ಯಾವುದೇ ತೊಂದರೆಗಳಿಲ್ಲದೆ ಸುಗಮ ಪ್ರಯಾಣಕ್ಕೆ ಅನುವು ಮಾಡಿಕೊಡಲು ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.
- ಘಟಕಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಚಾಲನಾ ಸಿಬ್ಬಂದಿಗಳಿಗೆ ಕಾಲ ಕಾಲಕ್ಕೆ ವಾಹನ ತಯಾರಿಕಾ ಸಂಸ್ಥೆ/ಮೆ:ಪಿ.ಸಿ.ಆರ್.ಎ. ವತಿಯಿಂದ ಮತ್ತು ನಿಗಮದ ತರಬೇತಿ ಕೇಂದ್ರಗಳಲ್ಲಿ ತರಬೇತಿ ಕಾರ್ಯಗಳನ್ನು ಹಮ್ಮಿಕೊಂಡು, ಉತ್ತಮ ಚಾಲನಾ ಕೌಶಲ್ಯಗಳ ಬಗ್ಗೆ ಅರಿವು ಮೂಡಿಸಿ ಇಂಧನ ಕ್ಷಮತೆಯನ್ನು ಉತ್ತಮಪಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.
- ವಾಹನಗಳಿಗೆ ಅವಶ್ಯಕತೆಗನುಗುಣವಾಗಿ ಅಗತ್ಯ ಬಿಡಿಭಾಗಗಳನ್ನು ಮೂಲ ತಯಾರಿಕಾ ಸಂಸ್ಥೆ ಹಾಗೂ ಸರಬರಾಜುದಾರರುಗಳಿಂದಲೇ ಉತ್ತಮ ಗುಣಮಟ್ಟದ ಬಿಡಿಭಾಗಗಳನ್ನು ಖರೀದಿಸಿ ವಾಹನಗಳಿಗೆ ಅಳವಡಿಸಲಾಗುತ್ತಿರುತ್ತದೆ ಹಾಗೂ ಟೈರುಗಳ ನಿರ್ವಹಣೆಗಳನ್ನು ಕ್ರಮಬದ್ಧವಾಗಿ ನಿರ್ವಹಿಸಿ ಟೈರುಗಳ ಮೇಲಿನ ವೆಚ್ಚವನ್ನು ನಿಯಂತ್ರಿಸಲಾಗುತ್ತಿರುತ್ತದೆ.
- ಕರ್ನಾಟಕ ಮತ್ತು ನೆರೆ ರಾಜ್ಯಗಳಾದ ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಗುಜರಾತ್, ತಮಿಳುನಾಡು ಮತ್ತು ಪುದುಚೆರಿ ರಾಜ್ಯಗಳ ಜೊತೆಗೆ ನೂತನ ಪೂರಕ ಅಂತರರಾಜ್ಯ ಸಾರಿಗೆ ಒಪ್ಪಂದಗಳನ್ನು ಮಾಡಿಕೊಳ್ಳುವ ಪ್ರಸ್ತಾವನೆ ಇದ್ದು ಒಪ್ಪಂದಗಳ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. ಈ ರಾಜ್ಯಗಳ ಜೊತೆಗೆ ಒಪ್ಪಂದವಾದ ನಂತರ ಕರ್ನಾಟಕದಿಂದ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲು ಹಾಗೂ ಹೆಚ್ಚು ಸಾರಿಗೆ ಆದಾಯ ಗಳಿಸಲು ಅವಕಾಶವಾಗುವುದು.
- ಕ.ರಾ.ರ.ಸಾ ನಿಗಮವು ಟಿಕೇಟ್ ವಿತರಣೆಯಲ್ಲಿ ಸರಳತೆ ಹಾಗೂ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಇ.ಟಿ.ಎಂ. (Electronic Ticketing Machine) ಜಾರಿಗೆ ತಂದಿರುತ್ತದೆ.
- ಸಾರ್ವಜನಿಕ ಪ್ರಯಾಣಿಕರಿಗೆ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸುವ ಅನುಕೂಲಕ್ಕಾಗಿ ನಿಗಮವು ಅವತಾರ್ (ಯಾವುದೇ ಸ್ಥಳದಿಂದ ಯಾವುದೇ ಸಮಯದಲ್ಲಿ ಟಿಕೆಟು ಕಾಯ್ದಿರಿಸುವಿಕೆ) ಗಣಕೀಕೃತ ಮುಂಗಡ ಬುಕಿಂಗ್ ಯೋಜನೆ ಜಾರಿಗೊಳಿಸಿದ್ದು, ರಾಜ್ಯದ ಹಾಗೂ ಹೊರ ರಾಜ್ಯಗಳ ಪ್ರಮುಖ ಸ್ಥಳಗಳಲ್ಲಿ ನಿಗಮದ ಕೌಂಟರುಗಳು/ಖಾಸಗಿ ಬುಕಿಂಗ್ ಏಜೆಂಟರುಗಳ ಮೂಲಕ ಮುಂಗಡ ಟಿಕೆಟ್ ಬುಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
- ಕರಾರಸಾ ನಿಗಮದ ಸಾರಿಗೆಗಳಲ್ಲಿ ಮುಂಗಡ ಆಸನಗಳನ್ನು ಕಾಯ್ದಿರಿಸಲು ಜಿ.ಪಿಆರ್‌ಎಸ್ ಸೌಲಭ್ಯವುಳ್ಳ ಮೊಬೈಲ್ ದೂರವಾಣಿ ಮೂಲಕ ಮುಂಗಡ ಟಿಕೆಟು ಕಾಯ್ದಿರಿಸುವ ಎಂ-ಬುಕಿಂಗ್ ಮತ್ತು ಇ-ಬುಕಿಂಗ್ ವ್ಯವಸ್ಥೆ ಜಾರಿಗೊಳಿಸಿದೆ.

--2

- ಸಾರ್ವಜನಿಕ ಪ್ರಯಾಣಿಕರು ನಿಲ್ದಾಣವಾರು ವಾಹನಗಳ ನಿರ್ಗಮನಗಳ ಮಾಹಿತಿ ಪಡೆಯಲು ಮೈಸೂರು ನಗರದ ನಗರ ಸಾರಿಗೆ ವಾಹನಗಳಲ್ಲಿ **ಐ.ಟಿ.ಎಸ್.** (ಇಂಟೆಲಿಜೆಂಟ್ ಟ್ರಾನ್ಸ್‌ಪೋರ್ಟ್ ಸಿಸ್ಟಮ್) ವ್ಯವಸ್ಥೆಯನ್ನು ಅಳವಡಿಸಲಾಗಿದ್ದು, ಸದರಿ ವಾಹನಗಳಲ್ಲಿ ಸಾರ್ವಜನಿಕ ಪ್ರಯಾಣಿಕರಿಗೆ ನಿಲ್ದಾಣವಾರು ಘೋಷಣೆಯ ವ್ಯವಸ್ಥೆಯನ್ನು ಅಳವಡಿಸಲಾಗಿದೆ. (ಪ್ಯಾಸೆಂಜರ್ ಅನೌನ್ಸ್‌ಮೆಂಟ್ ಸಿಸ್ಟಮ್).
- ಚಾಲನಾ ಸಿಬ್ಬಂದಿಗಳ ಅನುಕೂಲಕ್ಕಾಗಿ ಎಲ್ಲಾ ಘಟಕಗಳಲ್ಲಿ ಗಣಕೀಕೃತ ಡ್ಯೂಟಿರೋಟಾ ಸಿಸ್ಟಮ್‌ನ್ನು ಅಳವಡಿಸಿ ಮಾರ್ಗ ನಿಯೋಜನೆಯಲ್ಲಿ ಪಾರದರ್ಶಕ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.
- ನಿಗಮದ ಘಟಕಗಳಲ್ಲಿನ ಚಾಲನಾ/ತಾಂತ್ರಿಕ ಸಿಬ್ಬಂದಿಯ ರಜೆ ಮಂಜೂರಾತಿಯಲ್ಲಿ ಪಾರದರ್ಶಕತೆ ತರಲು ರಜೆ ಪಡೆಯುವ ಸಿಬ್ಬಂದಿಗಳು ಮೊಬೈಲ್/ಗಣಕ ಯಂತ್ರಗಳ ಮೂಲಕ ರಜೆ ಪಡೆಯುವ ಗಣಕೀಕೃತ ರಜೆ ವ್ಯವಸ್ಥೆನ್ನು (Online Leave Management System) ಅಳವಡಿಸಲಾಗಿದೆ.
- ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ನಿಗಮದ ಪ್ರಮುಖ 107 ಬಸ್ ನಿಲ್ದಾಣಗಳಲ್ಲಿ ವಾಹನಗಳ ಸಂಖ್ಯೆ, ನಿರ್ಗಮನದ ವೇಳೆ, ತಲುಪುವ ಸ್ಥಳ, ಮಾರ್ಗದ ಮಾಹಿತಿಯನ್ನು ಸಾರ್ವಜನಿಕ ಉದ್ಘೋಷಣಾ ವ್ಯವಸ್ಥೆಯ ಮುಖಾಂತರ ತಿಳಿಸಲಾಗುತ್ತಿದೆ.
- ಕ.ರಾ.ರ.ಸಾ.ನಿಗಮದ ವತಿಯಿಂದ ಬೆಂಗಳೂರಿನಿಂದ ತಿರುಪತಿ-ತಿರುಮಲಕ್ಕೆ ಪ್ಯಾಕೇಜ್ ಟೂರ್‌ಗಳ ಆಚರಣೆ ಮಾಡಲಾಗುತ್ತಿದೆ.
- ಕರಾರಸಾ ನಿಗಮವು ಪರ್ಯಾಯ ಆದಾಯ ಕ್ರೋಢೀಕರಣದ ಸಲುವಾಗಿ ನೂತನ ಪಾರ್ಸಲ್ ಮತ್ತು ಕಾರ್ಗೋ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿರುತ್ತದೆ. ಇದರಿಂದ ನಿಗಮದ ಸಾರಿಗೇತರ ಆದಾಯದ ಹೆಚ್ಚಳವನ್ನು ನಿರೀಕ್ಷಿಸಲಾಗಿದೆ.

**ಈ ಪಾರ್ಸಲ್ ವ್ಯವಸ್ಥೆಯ ರೂಪುರೇಷೆಗಳು ಈ ಕೆಳಕಂಡಂತಿವೆ:**

- ಕರಾರಸಾನಿಗಮ, ವಾಕರಸಾಸಂಸ್ಥೆ ಹಾಗೂ ಈಕರಸಾಸಂಸ್ಥೆ ವ್ಯಾಪ್ತಿಯ ಆಯ್ದ ಬಸ್ ನಿಲ್ದಾಣಗಳಲ್ಲಿ ಪಾರ್ಸೆಲ್ ಸೇವಾ ಕೌಂಟರ್ ತೆರೆಯಲಾಗಿದ್ದು, ಸಾರ್ವಜನಿಕರು ತಮ್ಮ ಪಾರ್ಸೆಲ್ / ಲೈಟ್ ಪಾರ್ಸೆಲ್‌ಗಳನ್ನು ಈ ನೂತನ ಯೋಜನೆಯಡಿಯಲ್ಲಿ ಒಂದು ಬಸ್ ನಿಲ್ದಾಣದಿಂದ ಮತ್ತೊಂದು ಬಸ್ ನಿಲ್ದಾಣಕ್ಕೆ ಕಳುಹಿಸಬಹುದಾಗಿರುತ್ತದೆ. ಅಲ್ಲದೇ ಸಾರ್ವಜನಿಕರು ತಮ್ಮ ಪಾರ್ಸೆಲ್ ಸ್ವೀಕೃತಿ ಆಗುವ ಬಗ್ಗೆ ಎಸ್‌ಎಂಎಸ್ ಮೂಲಕ ಮಾಹಿತಿ ನೀಡುವ ವ್ಯವಸ್ಥೆಯನ್ನು ಜಾರಿಗೆ ತರಲಾಗಿರುತ್ತದೆ.
- ಈ ಸಂಬಂಧ ಮೊದಲ ಹಂತದಲ್ಲಿ ರಾಜ್ಯದೊಳಗಿನ 88 ಕೌಂಟರ್‌ಗಳು ಹಾಗೂ ಅಂತರರಾಜ್ಯಗಳಲ್ಲಿನ 21 ಸ್ಥಳಗಳಲ್ಲಿ ಒಟ್ಟಾರೆ 109 ಕೌಂಟರ್‌ಗಳನ್ನು ತೆರೆಯಲು ಯೋಜಿಸಲಾಗಿರುತ್ತದೆ.
- ಮುಂದೆ ಹಂತ ಹಂತವಾಗಿ ರಾಜ್ಯದ ಎಲ್ಲಾ ತಾಲ್ಲೂಕು ಹಾಗೂ ಪ್ರಮುಖ ಸ್ಥಳಗಳಲ್ಲಿ ಸೇವಾ ಕೇಂದ್ರಗಳನ್ನು ತೆರೆಯುವ ಉದ್ದೇಶ ಹೊಂದಿರುತ್ತದೆ.